Collection of tax from local lorry owners.

*Q.—249. Sri D. MUNICHINNAPPA (Bangalore South).—

Will the Government be pleased to state :—

(*a*) whether it is not a fact that a tax of Rs. 650 to Rs. 750 per quarter, is being collected from local lorry owners in Bangalore City ;

(*b*) whether it has come to their notice that the Police Department is harassing the lorry owners, even after collecting such heavy tax from them ;

(*c*) whether the Government would see that no such trouble is given by the Police to the lorry owners at least in future ?

A.—Sri D. DEVARAJ URS (Minister for Transport and Tourism).—

(*a*) Tax is assessed on the lorries in the State on the basis of permitted laden weight and not on the area of permit granted, as per the revised rates fixed by the Mysore Motor Vehicles Taxation (Amendment) Act, 1965 (Mysore Act 23 of 1965) which came into force with effect from 1st January 1966.

(*b*) No.

(*c*) Does not arise.

ಶ್ರೀ ಡಿ. ಮುನಿಚಿನ್ನಪ್ಪ.—ಸ್ವಾಮಿ, ಲೋಕಲ್ ಲಾರಿಗಳವರು ಕಲ್ಲು ಮತ್ತು ಮಣ್ಣುಗಳನ್ನು ಹೊಡೆದುಕೊಂಡು ಅದರಿಂದ ಬಂದ ಹಣವಿಂದ ಜೀವನ ಮಾಡುತ್ತಿದ್ದಾರೆ. ಈಗ ಆ ಲಾರಿಗಳವರಿಗೆ ಹಾಕಿರತಕ್ಕ ತೆರಿಗೆ ಬಹಳ ಜಾಸ್ತಿ ಇದೆ. ಆದ್ದರಿಂದ ಸಾಧ್ಯವಾದ ಮಟ್ಟಿಗೆ ಅವರಿಗೆ ಹಾಕಿರತಕ್ಕ ತೆರಿಗೆಯನ್ನು ಕಡಿಮೆ ಮಾಡಿ ಆ ಬಡ ಲಾರಿ ಮಾಲೀಕರುಗಳಿಗೆ ಸಹಾಯ ಮಾಡುವುದಕ್ಕೆ ಸರ್ಕಾರದ ವರು ಪ್ರಯತ್ನ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಮೋಟಾರು ವೆಹಿಕಲ್ಸ್ ಟ್ಯಾಕ್ಸೇಷನ್ ಆಕ್ಟನ್ನು ಅಮೆಂಡ್ ಮಾಡಿ ಹೊಸ ಕಾನೂನು ಪ್ರಕಾರ ಎಷ್ಟು ತೆರಿಗೆ ಹಾಕಿದ್ದಾರೆಯೋ ಅಷ್ಟು ಕೊಡಬೇಕಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಶ್ರೀಮಾನ್ ಮುನಿಚಿನ್ನಪ್ಪನವರು ಈ ವಿಷಯದಲ್ಲಿ ಬಡವರಿಗೆ ತೊಂದರೆಯಾಗುತ್ತದೆ ಎಂದು ಆಗಾಗ್ಗೆ ಸರ್ಕಾರದವರ ಗಮನಕ್ಕೆ ತರುತ್ತಿದ್ದಾರೆ. ಆದ್ದರಿಂದ ಈಗಲಾದರೂ ಅವರು ಕಾಂಗ್ರೆಸ್ಸಿಗೆ ಸೇರಿದ ಮೇಲೆ ಆ ತೆರಿಗೆಯನ್ನು ರಿಯಾಯ್ತಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

Mr. SPEAKER.—It is disallowed.

ಶ್ರೀ ಬಿ. ಬೈರಪ್ಪಾಜಿ.—ಈ ಲಾರಿ ಮಾಲೀಕರುಗಳಿಗೆ ಪೋಲೀಸು ಇಲಾಖೆಯವರಿಂದ ತೊಂದರೆ ಯಾಗುತ್ತಿರುವುದು ಸರ್ಕಾರದವರಿಗೆ ಗೊತ್ತಿಲ್ಲ ಎಂದು ಹೇಳಿದ್ದಾರೆ. ಆದರೆ ಈ ಲಾರಿ ಮಾಲೀಕರು ಗಳಿಗೆ ಪೋಲೀಸು ಇಲಾಖೆಯವರಿಂದ ಕಿರುಕುಳವಾಗುತ್ತಿದೆ ಎಂದು ಈ ಮಾನ್ಯ ಸದಸ್ಯರು ಆಗಿಂದಾಗ್ಗೆ ಹೇಳುತ್ತಿದ್ದಾರೆ. ಆದ್ದರಿಂದ ಅದನ್ನು ತಪ್ಪಿಸುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡುತ್ತಾರೆಯೇ ?

ಶ್ರೀ ಡಿ. ದೇವರಾಜ ಅರಸ್.—ಪೋಲೀಸಿನವರಿಂದ ಅವರಿಗೆ ಕಿರುಕುಳ ಆಗದಂತೆ ಅದನ್ನು ತಪ್ಪಿಸುವ ಉದ್ದೇಶದಿಂದ ಸಾಕಷ್ಟು ರೀತಿಯಲ್ಲಿ ಅಧಿಕಾರಿಗಳಿಗೆ ಆಜ್ಞೆಯನ್ನು ಕೊಟ್ಟಿದ್ದೇವೆ. ಅಂಥಾದ್ದು ಯಾವುದಾದರೂ ಮಾನ್ಯ ಸದಸ್ಯರ ಗಮನಕ್ಕೆ ಬಂದಿರುವುದು ಇದ್ದರೆ ಅದನ್ನು ಸರ್ಕಾರದ ವರ ಗಮನಕ್ಕೆ ತಂದರೆ ಅದನ್ನು ವಿಚಾರ ಮಾಡುತ್ತೇವೆ.

ಶ್ರೀ ಸಿದ್ದಯ್ಯಕಾಶೀಮಠ.—ಲಾರಿ ಮಾಲೀಕರುಗಳಿಗೆ ಪೋಲೀಸಿನವರಿಂದ ಕಿರುಕುಳವಾಗು ತ್ತಿಲ್ಲ ಎಂದು ಸರ್ಕಾರದವರು ಹೇಳಿದ್ದಾರೆ. ಇದಕ್ಕಾಗಿ ಒಂದು ಸ್ಪೆಷಲ್ ಸಿಬ್ಬಂದಿಯನ್ನು ನೇಮಕ ಮಾಡಿ ಆ ಲಾರಿ ಮಾಲೀಕರುಗಳಿಗೆ ಕಿರುಕುಳ ಕೊಡುವುದನ್ನು ತಪ್ಪಿಸಿ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಅದಕ್ಕೆ ಸ್ಪೆಷಲ್ ಸಿಬ್ಬಂದಿ ಇದೆ. ಎಜಿಲೆನ್ಸ್ ಕಮೀಷನರು ಇದ್ದಾರೆ. ಡೈರೆಕ್ಟರ್ ಆಫ್ ಆಂಟಿ ಕರಪ್‌ಷನ್ ಇದ್ದಾರೆ. ಅದರ ಮೇಲ್ಪಟ್ಟು ಅಂಥಾ ಕೇಸುಗಳನ್ನು ಸರ್ಕಾರದವರ ಗಮನಕ್ಕೆ ತಂದರೆ ಅದನ್ನು ನೋಡೋಣ.

ಶ್ರೀ ಡಿ. ಮುನಿಚಿನ್ನಪ್ಪ.—ಈ ತೆರಿಗೆಯನ್ನು ಸಾಧ್ಯವಾದ ಮಟ್ಟಿಗೆ ಸರ್ಕಾರದವರು ಕಡಿಮೆ ಮಾಡಿದರೆ ಒಳ್ಳೆಯದು. ಲಾರಿಗಳವರು ರಾಜ್ಯದಲ್ಲಿ ಎಲ್ಲೇ ಹೋದರೂ ಕೂಡ ಬಿಡುವುದಿಲ್ಲ. ಪೋಲೀಸಿನವರು ನುಮ್ಮನೆ ಲಾರಿಯನ್ನು ನಿಲ್ಲಿಸಿ ತೊಂದರೆ ಕೊಡುತ್ತಿದ್ದಾರೆ. ತಪ್ಪು ಮಾಡಿದವರನ್ನು ಶಿಕ್ಷಿಸಬೇಕಾದ್ದು ಸರ್ಕಾದವರ ಕರ್ತವ್ಯ. ತಪ್ಪು ಇಲ್ಲದೆ ನುಮ್ಮನೆ ವೈಥಾ ತೊಂದರೆ ಕೊಡುತ್ತಿದ್ದಾರೆ. ಆದ್ದರಿಂದ ಇನ್ನು ಮೇಲಾದರೂ ಸರ್ಕಾರದವರು ತನಿಖೆ ನಡೆಸಿ ಅವರಿಗೆ ತೊಂದರೆ ಯಾಗದಂತೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಅದು ಒಂದು ಸೂಚನೆ.

Drinking water wells in Tumkur District.

*Q.—307. Sri B. BYRAPPAJI (Turuvekere).—

Will the Government be pleased to state :—

(*a*) the number of villages that have drinking water wells in Tumkur District (Talukwise information may be furnished) ;

(*b* the number of villages that have no Drinking Water Wells in Tumkur District (Talukwise information may be furnished) ;

(*c*) how many wells are under execution at present ;

(*d*) whether there is any scheme to provide Drinking water wells to those villages which have no Drinking Water Wells within the Third Five Year Pian period ?

A.—Sri R. M. PATIL (Minister for Development, Panchayathi Raj and Municipal Administration).—

(*a*) and (*b*) *Vide* Statement appended.

(*c*) 450.

(*d*) It is proposed to provide Drinking Water Wells to all the villages that have no Drinking Water Wells under the Central L. D. Programme Scheme provided sufficient funds are released.